1434 (79) ಶ್ರೀ ಬಸವರಾಜು ಎ.ಎಸ್.(ಅರಸೀಕೆರೆ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು?(ಜಿಲ್ಲಾವಾರು ವಿವರ ನೀಡುವುದು).

ಆ) ಅಂಗನವಾಡಿ ಶಿಕ್ಷಕಿ/ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಸಂಖ್ಯೆ ಎಷ್ಟು? ಜಿಲ್ಲಾವಾರು ವಿವರ ನೀಡುವುದು?

ಇ) ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ಪ್ರತಿ ತಿಂಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೊಡುವ ಗೌರವಧನ ಅಥವಾ ವೇತನವೆಷ್ಟಷ್ಟು?

ಈ) ಈ ಸಿಬ್ಬಂದಿಗೆ ವಿಮಾ ಯೋಜನೆಯ ಸವಲತ್ತು ಏನು ಮತ್ತು ಎಷ್ಟು?

ಶ್ರೀಮತಿ. ಭಾಗೀರಥಿ ಮರುಳಸಿದ್ದನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) 40301 ಜಿಲ್ಲಾವಾರು ವಿವರವನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ಜಿಲ್ಲಾವಾರು ವಿವರವನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಇ) ವಿವರವನ್ನು ಅನುಬಂಧ–2 ರಲ್ಲಿ ಲಗತ್ತಿಸಿದೆ.

ಈ) ಕೇಂದ್ರ ಸರ್ಕಾರದ ಅಂಗನವಾಡಿ ಕಾರ್ಯಕರ್ತೆ ವಿಮಾ ಯೋಜನೆಯ ಪ್ರಮುಖ ಸವಲತ್ತುಗಳು:–

1. ಈ ಯೋಜನೆಯಲ್ಲಿ 18 ರಿಂದ 60 ವರ್ಷದೊಳಗಿನ ಅಂಗನವಾಡಿ ಕಾರ್ಯಕರ್ತೆ/ ಅಂಗನವಾಡಿ ಸಹಾಯಕಿಯರು ಅರ್ಹರಿರುತ್ತಾರೆ.

2. ಅಪಘಾತ ಹೊರತುಪಡಿಸಿ ಸಹಜ ಮರಣಕ್ಕೆ ರೂ.20,000/–.

3. ಅಪಘಾತ ಮರಣಕ್ಕೆ ರೂ.50,000/–

4. ಅಪಘಾತದಿಂದ ಖಾಯಂ ಅಂಗವಿಕಲತೆಗೆ ರೂ.50,000/–

5. ಎರಡು ಕಣ್ಣು ಮತ್ತು ಎರಡು ಕಾಲುಗಳನ್ನು ಕಳೆದುಕೊಂಡರೆ ಅಥವಾ ಒಂದು ಕಣ್ಣು ಮತ್ತು ಕಾಲನ್ನು ಕಳೆದುಕೊಂಡರೆ ರೂ.50,000/–

6. ಒಂದು ಕಣ್ಣು ಅಥವಾ ಒಂದು ಕಾಲನ್ನು ಕಳೆದುಕೊಂಡರೆ ರೂ.25,000/–

7. 9ರಿಂದ 12 ತರಗತಿಯವರೆಗೆ ಓದುತ್ತಿರುವ ವಿಮಾ ಯೋಜನೆಗೆ ಒಳಪಟ್ಟವರ ಮಕ್ಕಳಿಗೆ ತ್ರೈಮಾಸಿಕ ರೂ.300/–ಗಳ ಶಿಷ್ಯ ವೇತನ(2 ಮಕ್ಕಳಿಗೆ ಮಾತ್ರ) ಅನುತ್ತೀರ್ಣರಾದರೆ ಈ ಸೌಲಭ್ಯಕ್ಕೆ ಅರ್ಹರಲ್ಲ.

8. ತೀವ್ರತರವಾದ ಖಾಯಿಲೆಗಳಿಗೆ ರೂ.20,000/–ಗಳನ್ನು ನೀಡಲಾಗುತ್ತದೆ.

9. ವಾರ್ಷಿಕ ಪ್ರೀಮಿಯಂ ರೂ.280/– ಆಗಿದ್ದು, ಇದರಲ್ಲಿ ಕೇಂದ್ರ ಸರ್ಕಾರ ರೂ.100/– ಮತ್ತು ಎಲ್.ಐ.ಸಿ.ರೂ.100/– ಹಾಗೂ ವಿಮಾ ಯೋಜನೆಗೆ ಒಳಪಟ್ಟ ಕಾರ್ಯಕರ್ತೆ ಅಥವಾ ಸಹಾಯಕಿ ರೂ.80/–ನ್ನು ವಂತಿಗೆಯಾಗಿ ಭರಿಸಬೇಕಾಗಿರುತ್ತದೆ.

ಅನುಬಂಧ–I

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಮಂಜೂರಾದ ಅಂಗನವಾಡಿ ಕೇಂದ್ರಗಳು	ಕಾರ್ಯನಿರತ ಅಂಗನವಾಡಿ ಕಾರ್ಯಕರ್ತೆಯರು	ಕಾರ್ಯನಿರತ ಅಂಗನವಾಡಿ ಸಹಾಯಕಿಯರು
1	ಬಾಗಲಕೋಟೆ	1366	1330	1365
2	ಬೆಂಗಳೂರು (ಗ್ರಾ)	1192	1191	1188
3	ಬೆಂಗಳೂರು (ನ)	1891	1887	1890
4	ಬೆಳಗಾಂ	3773	3696	3693
5	ಬಳ್ಳಾರಿ	1372	1361	1368
6	ಬೀದರ್	1151	1141	1151
7	ಬಿಜಾಪುರ	1301	1254	1299
8	ಚಾಮರಾಜನಗರ	1085	1084	1084
9	ಚಿಕ್ಕಮಗಳೂರು	1226	1216	1226
10	ಚಿತ್ರದುರ್ಗ	1336	1308	1366
11	ದಕ್ಷಿಣ ಕನ್ನಡ	1775	1729	1773
12	ದಾವಣಗೆರೆ	1262	1250	1260
13	ಧಾರವಾಡ	806	796	805
14	ಗದಗ	835	826	835
15	ಗುಲ್ಬರ್ಗ	2350	2314	2349
16	ಹಾಸನ	1603	1591	1601
17	ಹಾವೇರಿ	1249	1233	1248
18	ಕೋಲಾರ	2361	2341	2360
19	ಕೊಡಗು	692	689	689
20	ಕೊಪ್ಪಳ	893	889	893
21	ಮಂಡ್ಯ	1655	1632	1650
22	ಮೈಸೂರು	1930	1920	1929
23	ರಾಯಚೂರು	1308	1302	1306
24	ಶಿವಮೊಗ್ಗ	1323	1315	1322
25	ತುಮಕೂರು	2337	2317	2337
26	ಉಡುಪಿ	1027	997	1026
27	ಉತ್ತರಕನ್ನಡ	1202	1186	1202
	ಒಟ್ಟು	**40301**	**39795**	**40185**

ಅನುಬಂಧ–2

ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ನೀಡುತ್ತಿರುವ ಗೌರವಧನದವಿವರ:

ಕ್ರ. ಸಂ.	ವಿದ್ಯಾರ್ಹತೆಯ ವಿವರ	ಭಾರತ ಸರ್ಕಾರದಿಂದ ದಿಂದ ನೀಡುತ್ತಿರುವ ಗೌರವ ಧನ	ರಾಜ್ಯಸರ್ಕಾರದಿಂದ ನೀಡುತ್ತಿರುವ ಹೆಚ್ಚುವರಿ ಗೌರವ ಧನ	ಒಟ್ಟು
1.	ಎಸ್.ಎಸ್.ಎಲ್.ಸಿ. ಫೇಲ್	ರೂ.938	ರೂ.450	ರೂ.1388
2.	ಎಸ್.ಎಸ್.ಎಲ್.ಸಿ. ಫೇಲ್ ಜೊತೆಗೆ 5 ವರ್ಷದ ಅನುಭವ	ರೂ.969	ರೂ.450	ರೂ.1419
3.	ಎಸ್.ಎಸ್.ಎಲ್.ಸಿ. ಫೇಲ್ ಜೊತೆಗೆ 10 ವರ್ಷದ ಅನುಭವ	ರೂ.1000	ರೂ.450	ರೂ.1450
4.	ಎಸ್.ಎಸ್.ಎಲ್.ಸಿ. ಉತ್ತೀರ್ಣ	ರೂ.1000	ರೂ.450	ರೂ.1450
5.	ಎಸ್.ಎಸ್.ಎಲ್.ಸಿ. ಉತ್ತೀರ್ಣ ಜೊತೆಗೆ 5 ವರ್ಷದ ಅನುಭವ	ರೂ.1031	ರೂ.450	ರೂ.1481
6.	ಎಸ್.ಎಸ್.ಎಲ್.ಸಿ. ಉತ್ತೀರ್ಣ ಜೊತೆಗೆ 10 ವರ್ಷದ ಅನುಭವ	ರೂ.1063	ರೂ.450	ರೂ.1513
7.	ಅಂಗನವಾಡಿ ಸಹಾಯಕಿಯರು	ರೂ.500	ರೂ.225	ರೂ.725

1436(1715) ಶ್ರೀ ಬಸವರಾಜ ಎ.ಎಸ್.(ಅರಸೀಕೆರೆ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷಿ ಮಾರುಕಟ್ಟೆ ಇಲಾಖೆಯಲ್ಲಿ ವ್ಯಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಿಕೊಳ್ಳದೆ ಆಮಾಲ್ಗಮೇಷನ್ ನಿಯಮ ಆಳವಡಿಸಿಕೊಂಡ ಔಚಿತ್ಯವೇನು

ಆ) ಅಮಾಲ್ಗಮೇಷನ್ ಆದೇಶದಡಿ ಅಕ್ರಮವಾಗಿ ಪತ್ತ ಸಂಖ್ಯೆ:273: ದಿ:30/07/1996ರಲ್ಲಿ 50 ಜನ ಬೆರಳಚ್ಚುಗಾರರಿಗೆ ನೇರವಾಗಿ ಪ್ರಥಮ ದರ್ಜೆ ಸಹಾಯಕರಾಗಿ ಬಡ್ತಿ ನೀಡಿರುವುದು ನಿಜವೇ .

ಇ) ಕರ್ನಾಟಕ ರಾಜ್ಯ ಪತ್ರ ಅಧಿಸೂಚನೆಯಲ್ಲಿ ಬೆರಳಚ್ಚುಗಾರಿಗೆ ಇಲಾಖಾ ಪರೀಕ್ಷೆ ಹಾಗೂ ಬಡ್ತಿ ನಮೂದಿತವಾಗದಿದ್ದರೂ ಸಹ ಇಲಾಖೆ ಇವುಗಳನ್ನು ಉಲ್ಲಂಘಿಸಿರುವುದು ಸರಿಯೇ

ಈ) ಹಾಗಿದ್ದಲ್ಲಿ ಆಮಾಲ್ಗಮೇಷನ್ ಅಧಿಸೂಚನೆ ಸಂಖ್ಯೆ:ಎಫ್‌ಡಿ:11:ಎಸ್‌ಆರ್‌ಪಿ:94, ದಿ:28/03/94ರ ನಿಯಮ 11ನ್ನು ಉಲ್ಲಂಘಿಸಿದಂತಾಗುವುದಿಲ್ಲವೇ

ಉ) ಬೆರಳಚ್ಚುಗಾರರಿಗೆ ಹೀಗೆ ನೀಡಿರವ ಬಡ್ತಿಗಳು ಅಕ್ರಮವಲ್ಲವೇ

ಊ) ಹಾಗಿದ್ದಲ್ಲಿ ಸರ್ಕಾರವು ಈ ಅಕ್ರಮ ಬಡ್ತಿಗಳನ್ನು ರದ್ದುಗೊಳಿಸುವ ಕ್ರಮ ಕೈಗೊಳ್ಳುವುದೇ?